ಅ) ರಾಜ್ಯದಲ್ಲಿರುವ ಮಂಗನ ಕಾಯಿಲೆ ವ್ಯಾಕ್ಸಿನ್ ಘಟಕಗಳೆಷ್ಟು? ಎಲ್ಲೆಲ್ಲಿವೆ?

ಆ) ಶಿವಮೊಗ್ಗದಲ್ಲಿರುವ ಘಟಕವು ಸರಿಯಾಗಿ ನಿರ್ವಹಣೆ ಹಾಗೂ ಮೂಲಭೂತ ಸೌಲಭ್ಯವಿಲ್ಲದೆ ಮುಚ್ಚುವ ಹಂತ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸುವಲ್ಲಿ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಒಂದು ಮಂಗನ ಕಾಯಿಲೆ ವ್ಯಾಕ್ಸೀನ್ ಘಟಕವು ಇರುತ್ತದೆ. ಈ ಘಟಕವು ಶಿವಮೊಗ್ಗದಲ್ಲಿದೆ.

ಆ) ಸದ್ಯದಲ್ಲಿ ಮಂಗನ ಕಾಯಿಲೆ ಲಸಿಕೆಯನ್ನು ಘಟಕದಲ್ಲಿ ಉತ್ಪಾದನೆ ಮಾಡುತ್ತಿದ್ದಾರೆ. ಉತ್ಪಾದನೆ ಕಟ್ಟಡವು ಹಳೆಯದಾಗಿದ್ದು ಇದನ್ನು 1998-99ರಲ್ಲಿ ದುರಸ್ತಿಗೊಳಿಸಿ ಆಗಸ್ಟ್ 1999 ರಿಂದ ಪುನಃ ಲಸಿಕೆಯನ್ನು ತಯಾರು ಮಾಡುತ್ತಿದ್ದಾರೆ.

ಇ) ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ವತಿಯಿಂದ ದುರಸ್ತಿ ಕೈಗೊಂಡಿರುತ್ತದೆ. ಹಾಗೂ ಪೂರ್ಣಗೊಂಡಿರುತ್ತದೆ. ಆದಾಗ್ಯೂ ಅಂತರ್ಜಲದ ಕಾರಣದಿಂದಾಗಿ ಕಟ್ಟಡದ ಆಸ್ತಿಭಾರ ಕುಸಿಯುತ್ತಿದ್ದು, ಪೂರ್ಣ ಪ್ರಮಾಣದ ದುರಸ್ತಿ ಸಾಧ್ಯವಿಲ್ಲವಾದ್ದರಿಂದ, ಬದಲಿ ಕಟ್ಟಡಕ್ಕೆ ಲಸಿಕಾ ಕೇಂದ್ರವನ್ನು ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕೊಡಗು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿನ ಖಾಲಿ ಹುದ್ದೆಗಳು

269 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕೊಡಗು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು? (ಆಸ್ಪತ್ರೆವಾರು ಒದಗಿಸುವುದು)

2. ಸೋಮವಾರ ಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಎಂದಿನಿಂದ ಭರ್ತಿ ಮಾಡಲಾಗುವುದು?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಸಚಿವರು) :

ಅ) 49 ವಿವರ ಈ ಕೆಳಕಂಡಂತಿದೆ.

1.	ಜಿಲ್ಲಾ ಕ್ಷಯರೋಗ ನಿವಾರಣಾ ಕೇಂದ್ರ, ಮಡಿಕೇರಿ	-	1
2.	ಜಲ್ಲಾ ಪ್ರಯೋಗ ಶಾಲೆ	-	1
3.	ತಾಲ್ಲೂಕು ಆರೋಗ್ಯಾಧಿಕಾರಿ	-	1
4.	ಪ್ರಾ.ಆ.ಕೇಂದ್ರ, ನಾಪೋಕ್ಲು (ಮಹಿಳೆ)	-	1
5.	ಪ್ರಾ. ಆ. ಕೇಂದ್ರ, ಭಾಗಮಂಡಲ (ಮಹಿಳೆ)	-	1

6. ತಾಲ್ಲೂಕು ಆರೋಗ್ಯಾಧಿಕಾರಿ ವಿರಾಜಪೇಟೆ	-	1
7. ಸಾರ್ವಜನಿಕ ಆಸ್ಪತ್ರೆ, ವಿರಾಜಪೇಟೆ	-	10
8. ಪ್ರಾ. ಆ. ಕೇ, ಹುಣಕೇರಿ, ವಿರಾಜಪೇಟೆ (ಮಹಿಳೆ)	-	1
9. ಪ್ರಾ. ಆ. ಕೇ, ಕನ್ನಂಗಾಲ, ವಿರಾಜಪೇಟೆ	-	1
10. ಸಮುದಾಯ ಆರೋಗ್ಯ ಕೇಂದ್ರ, ಪಾಲಿಬೆಟ್ಟ	-	3
11. ಸಂಚಾರಿ ಗಿರಿಜನ ಆರೋಗ್ಯ ಘಟಕ, ಕಲ್ಲಹಳ್ಳಿ	-	1
12. ತಾಲ್ಲೂಕು ಆರೋಗ್ಯಾಧಿಕಾರಿ, ಸೋಮವಾರಪೇಟೆ	-	1
13. ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ	-	8
14. ಪ್ರಾ. ಆ. ಕೇಂದ್ರ, ಶುಂಠಿಕೊಪ್ಪ	-	2
15. ಸಾರ್ವಜನಿಕ ಆಸ್ಪತ್ರೆ, ಕುಶಾಲನಗರ	-	1
16. ಸಮುದಾಯ ಆರೋಗ್ಯ ಕೇಂದ್ರ, ಶನಿವಾರಸಂತೆ	-	1
17. ಪ್ರಾ. ಆ. ಕೇಂದ್ರ, ಗೌಡಳ್ಳಿ	-	1
18. ಜಿಲ್ಲಾ ಆಸ್ಪತ್ರೆ, ಮಡಿಕೇರಿ	-	13
ಒಟ್ಟು		**49**

2) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ಹಾಗೂ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ವೈದ್ಯರುಗಳನ್ನು ಸ್ಥಳ ನಿಯುಕ್ತಿ ಮಾಡುವ ಮೂಲಕ ಅಲ್ಲದೆ, ಹೊಸದಾಗಿ ಈಗ ಆಯ್ಕೆ ಮಾಡಿರುವ ವೈದ್ಯರಿಗೆ ಸ್ಥಳ ನಿಯುಕ್ತಿ ಮಾಡುವಾಗ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಟಿ.ಸಿ.ಹೆಚ್. ಶಿಕ್ಷಕರ ಖಾಲಿ ಹುದ್ದೆಗಳು

270 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಟಿ.ಸಿ.ಹೆಚ್ ಶಿಕ್ಷಕರ ತರಬೇತಿ ಪಡೆದವರ ಸಂಖ್ಯೆ ಎಷ್ಟು?

ಆ) ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಈ ಖಾಲಿ ಹುದ್ದೆಗಳನ್ನು ಎಂದಿನಿಂದ ಭರ್ತಿ ಮಾಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಸುಮಾರು 71091

ಆ) ಫೆಬ್ರವರಿ 2000ದ ಅಂತ್ಯದವರೆಗೆ 142 ಹುದ್ದೆಗಳು ಖಾಲಿ ಇವೆ.